## ಸೇತುಬಂಧ ಹಾಗೂ ಪರಿಹಾರ ಬೋಧನೆಯ ಕಾರ್ಯಕ್ರಮ 2016-17

# 8 ನೆಯ ತರಗತಿ ಪ್ರಥಮ ಭಾಷೆ ಕನ್ನಡ

## ಸಾಮರ್ಥ್ಯಗಳು

1. ನಾಣ್ನುಡಿ, ಪದಪುಂಜ, ನುಡಿಗಟ್ಟು, ಸೌಮ್ಯೋಕ್ತಿಗಳನ್ನು ಬಳಸಿಕೊಂಡು ಮಾತನ್ನು ಕಲಾತ್ಮಕಗೊಳಿಸುವುದು.

2. ಓದಿದ ವಿಷಯ ವಿಚಾರಗಳ ಬಗೆಗೆ ಆಲೋಚಿಸಿ ತಾರ್ಕಿಕ ನಿಲುವನ್ನು ಪಡೆದು ತೀರ್ಮಾನಕ್ಕೆ ಬರುವ ಸಾಮರ್ಥ್ಯವನ್ನು ರೂಢಿಸಿಕೊಳ್ಳುವುದು.

3. ವಿಶಿಷ್ಟ ಪದಪುಂಜಗಳ ವಿವರಣೆ, ಹೊಸ ಪರಿಕಲ್ಪನೆ, ಸಮಾನಾರ್ಥಕ, ಭಿನ್ನಾರ್ಥಕ, ಅನೇಕಾರ್ಥಕ, ಪದಗಳನ್ನು ಗ್ರಹಿಸಿ ಸ್ವತಂತ್ರವಾಗಿ ವಾಕ್ಯಗಳಲ್ಲಿ ಬಳಸುವ ಸಾಮರ್ಥ್ಯವನ್ನು ಹೆಚ್ಚಿಸುವುದು.

4. ವಿಶಿಷ್ಟ ಪದಪ್ರಯೋಗಗಳ ಧ್ವನಿ, ಸಾಮ್ಯ ಧ್ವನಿಗಳನ್ನು ವರ್ಗೀಕರಿಸಿ, ನಿರ್ಣಯಿಸಿ, ಓದಿಕೊಂಡು ಬರೆವಣಿಗೆಯಲ್ಲಿ ಬಳಸುವುದು.

5. ಓದಿದ ಅಥವಾ ಮಾತಿನಲ್ಲಿರುವ ಭಾಷಾ ಸ್ವರಭಾರ ಮತ್ತು ಸೂಕ್ತ ಲೇಖನ ಚಿಹ್ನೆಗಳನ್ನು ಬರಹಕ್ಕೆ ಇಳಿಸುವ ಸಾಮರ್ಥ್ಯವನ್ನು ಹೆಚ್ಚಿಸುವುದು.

6. ಛಂದೋನಿಯಮಗಳನ್ನು ಅನುಸರಿಸಿ ಕವಿತೆಗಳಲ್ಲಿರುವ ಲಘು-ಗುರುಗಳನ್ನು ನಿರ್ಣಯಿಸಿ, ಗಣ ವಿಭಾಗಿಸಿ, ಪಾದಗಳನ್ನು ನಿಶ್ಚಿತವಾಗಿ ತಿಳಿಯುವ ಸಾಮರ್ಥ್ಯವನ್ನು ಪಡೆಯುವುದು.

# 9 ನೆಯ ತರಗತಿ ಪ್ರಥಮ ಭಾಷೆ ಕನ್ನಡ

## ಸಾಮರ್ಥ್ಯಗಳು

1. ಸಂಯುಕ್ತಾಕ್ಷರಗಳು ಮತ್ತು ಪರಿಚಿತ ಪದಗಳ ಉಕ್ತಲೇಖನ ತೆಗೆದುಕೊಳ್ಳುವುದು.

2. ಕವನ, ಕಾವ್ಯ, ಲಘು ಪ್ರಬಂಧ, ಕಥೆ ಮುಂತಾದ ಸಾಹಿತ್ಯ ಪ್ರಕಾರಗಳನ್ನು ಓದಿ ಅರ್ಥಮಾಡಿಕೊಳ್ಳುವುದರೊಂದಿಗೆ ಅವುಗಳ ಬಗ್ಗೆ ಮೌಖಿಕವಾಗಿ ಮತ್ತು ಲಿಖಿತ ರೂಪದಲ್ಲಿ ಅಭಿಪ್ರಾಯ ವ್ಯಕ್ತಪಡಿಸುವುದು.

3. ಪದ್ಯಗಳನ್ನು ಓದಿ ಅವುಗಳ ಸಾರಾಂಶಗಳನ್ನು ಅರ್ಥ ಮಾಡಿಕೊಳ್ಳುವ ಮತ್ತು ವಿವರಿಸುವ ಸಾಮರ್ಥ್ಯ ಹೊಂದುವುದು

4. ಸರಳ ವ್ಯಾಕರಣಾಂಶಗಳನ್ನು ಅರ್ಥಮಾಡಿಕೊಳ್ಳುವುದರೊಂದಿಗೆ ಛಂದಸ್ಸಿನ ಪರಿಚಯ ಮಾಡಿಕೊಳ್ಳುವುದು.

# 10 ನೇ ತರಗತಿ ಪ್ರಥಮ ಭಾಷೆ ಕನ್ನಡ

## ಸಾಮರ್ಥ್ಯಗಳು

1. ಸಂಯುಕ್ತಾಕ್ಷರಗಳು, ಲೇಖನ ಚಿಹ್ನೆಗಳನ್ನು ಒಳಗೊಂಡಂತೆ ಪರಿಚಿತ ಮತ್ತು ಅಪರಿಚಿತ ಪದಗಳ ಉಕ್ತಲೇಖನ ತೆಗೆದು ಕೊಳ್ಳುವುದು.

2. ಕವನ, ಕಾವ್ಯ, ಲಘು ಪ್ರಬಂಧ, ಕಥೆ ಮುಂತಾದ ಸಾಹಿತ್ಯದ ಪ್ರಕಾರಗಳನ್ನು ಓದಿ, ಅರ್ಥಮಾಡಿಕೊಳ್ಳುವುದರೊಂದಿಗೆ ಅವುಗಳ ಬಗ್ಗೆ ಮೌಖಿಕವಾಗಿ ಮತ್ತು ಲಿಖಿತರೂಪದಲ್ಲಿ ಅಭಿಪ್ರಾಯ ವ್ಯಕ್ತಪಡಿಸುವುದು.

3. ಹಳಗನ್ನಡ ಪದ್ಯಗಳನ್ನು ಓದಿ ಅವುಗಳ ಸಾರಾಂಶವನ್ನು ಅರ್ಥಮಾಡಿಕೊಳ್ಳುವ ಮತ್ತು ವಿವರಿಸುವ ಸಾಮರ್ಥ್ಯ ಹೊಂದುವುದು.

4. ಸರಳವ್ಯಾಕರಣಾಂಶಗಳನ್ನು ಅರ್ಥಮಾಡಿಕೊಳ್ಳುವುದರೊಂದಿಗೆ ಛಂದಸ್ಸಿನ ಪರಿಚಯ ಮಾಡಿಕೊಳ್ಳುವುದು.